# ವಿದ್ವತ್ತಿನ ಒಳಗುದಿ

'ಮಹಾಭಾರತದ ಅರ್ಥವಂತಿಕೆ' ಎಂಬ ವಿಷಯವನ್ನು ಕುರಿತು ಡಾ. ವಿ.ಎಸ್. ಸುಕ್ಥಂಕರ್, ನಾಲ್ಕು ಭಾಷಣಗಳನ್ನು ಮಾಡಿದರು. ಇದು 1942–43 ರಲ್ಲಿ. ಮುಂಬೈ ವಿಶ್ವವಿದ್ಯಾಲಯದಲ್ಲಿ ನಡೆಯಿತು. ಈ ವಿಷಯವನ್ನು ಮಾತನಾಡಲು ಡಾ. ಸುಕ್ಥಂಕರ್‌ಗಿಂತ ಯೋಗ್ಯರು ಪ್ರಾಯಃ ಬೇರಾರೂ ಇರಲಾರರು. ಏಕೆಂದರೆ ಅದಾಗಲೇ 18 ವರ್ಷಗಳ ಕಾಲ ಮಹಾಭಾರತದ ಪರಿಷ್ಕೃತ ಪಾಠವನ್ನು ಸಿದ್ಧಪಡಿಸಲು ದೇಶ–ವಿದೇಶಗಳ ಸಂಪಾದಕ ಮಂಡಳಿಯ ಪ್ರಧಾನ ಸಂಪಾದಕರಾಗಿ ಸುಕ್ಥಂಕರ್ ಕೆಲಸ ಮಾಡಿದ್ದರು. 18 ವರ್ಷಗಳ ಮಹಾಭಾರತದಲ್ಲಿ ಮೊದಲ ಪರ್ವದ 'ಆದಿಪರ್ವ'ದ ಪರಿಷ್ಕೃತ ಪಾಠವನ್ನು ಹೊರತಂದು ಅದು ವ್ಯಾಪಕವಾದ ಪ್ರಶಂಸೆಯನ್ನು ಪಡೆದಿತ್ತು. ಸುಕ್ಥಂಕರ್ ಇಂಗ್ಲೆಂಡ್, ಜರ್ಮನಿಗಳಲ್ಲಿ ವ್ಯಾಸಂಗ ಮಾಡಿದ್ದವರು. ಸಂಸ್ಕೃತ ಭಾಷಾ ಶಾಸ್ತ್ರ, ಗ್ರಂಥ ಸಂಪಾದನೆ, ಗಣಿತದಲ್ಲಿ ವೈಜ್ಞಾನಿಕ ಶಿಕ್ಷಣವನ್ನು ಪಡೆದವರು. ಹೆಚ್ಚು ಹೇಳಬೇಕಿಲ್ಲ.

ಸುಕ್ಥಂಕರ್ ತಮ್ಮ ಭಾಷಣದ ಪ್ರಾರಂಭದಲ್ಲಿ 13ನೆಯ ಶತಮಾನದ ಆನಂದತೀರ್ಥ ಮಧ್ವಾಚಾರ್ಯರು ಮಹಾಭಾರತದ ಬಗ್ಗೆ ತಾವು ರಚಿಸಿದ 'ಮಹಾಭಾರತ ತಾತ್ಪರ್ಯ ನಿರ್ಣಯ' ಎನ್ನುವ ಗ್ರಂಥದಲ್ಲಿ ಹೇಳಿದ ಮಾತೊಂದನ್ನು ಉಲ್ಲೇಖಿಸಿದರು. 'ದುರ್ವಿಜ್ಞೇಯಂ ಅತಃ ಸರ್ವೈಃ ಭಾರತಂ ತು ಸುರೈರಪಿ' ಎನ್ನುವ ಮಾತು ಅದು. ಮಹಾಭಾರತದ ಅಂತರಾರ್ಥವನ್ನು ತಿಳಿಯುವುದು ಯಾರಿಗೂ ಸುಲಭ ಸಾಧ್ಯವಲ್ಲ– ದೇವತೆಗಳಿಗೆ ಕೂಡ ಎನ್ನುವುದು ಈ ಉಲ್ಲೇಖದ ಅರ್ಥ.

ಆನಂದತೀರ್ಥರು ಭಾರತೀಯರನ್ನು ಕುರಿತೇ ಈ ಮಾತನ್ನು ಹೇಳಿದ್ದು. ಇದು ವಿದಿತವೇ ಇದೆ. ಈ ಮಾತು ಸರಿಯಾಗಿ ಅರ್ಥವಾಗುವುದಾದರೆ ಹಾಗೆ ಅರ್ಥವಾಗುವ ಸಾಧ್ಯತೆ ಭಾರತೀಯರಿಗೇ ಹೆಚ್ಚು. ಅಲ್ಲದೆ ಗ್ರಂಥ ಒಂದರ ಶುದ್ಧ ಪಾಠ ಅತ್ಯಂತ ಅಪೇಕ್ಷಿತವಾದರೂ, ಈ ವಿಷಯದಲ್ಲಿ ಎರಡು ಮಾತೇ ಇಲ್ಲವಾದರೂ ಶುದ್ಧ ಪಾಠವೊಂದನ್ನು ಸಂಪಾದಿಸುವ ಪ್ರಯತ್ನದಲ್ಲಿ ಆನಂದತೀರ್ಥಕ್ಕೆ ಮೊದಲಿಗರಾದರೂ, ಶುದ್ಧ ಪಾಠದ ಮೂಲಕ ಗ್ರಂಥದ ದುರ್ವಿಜ್ಞೇಯತೆ ಇಲ್ಲವಾಗಬಹುದು ಎಂದು ಎದೆತಟ್ಟಿ ಹೇಳುವಂತಿಲ್ಲ ಎನ್ನುವುದೂ ಆನಂದತೀರ್ಥರೇ ಆಡಿದ ಈ ಮಾತಿನ ಅರ್ಥವಾಗಿರುವಂತಿದೆ! ಆಧುನಿಕ ಕಾಲದಲ್ಲಿ ಮಹಾಭಾರತದ ಸಂಪಾದಕರಾದ ಸುಕ್ಥಂಕರ್‌ಗೆ ಇದು ಹಾಗೇ ಅರ್ಥವಾದಂತಿದೆ! ಅಂದರೆ ಗ್ರಂಥವೊಂದರ ಅಂತರಾರ್ಥವನ್ನು ಕಂಡುಕೊಳ್ಳುವುದೆನ್ನುವುದು ಅದರ ಕುರಿತಾದ ಪಾಂಡಿತ್ಯ ಸಂಪಾದನೆಗಿಂತ ಬೇರೆಯಾಗಿಯೂ ಇರಬಹುದಾದ ಒಂದು ವಿಶಿಷ್ಟ ಸಂಗತಿಯಾಗಿ ಸುಕ್ಥಂಕರ್‌ಗೆ ಕಾಣಲು ತೊಡಗಿದೆ!

ತಾವು ಸಂಪಾದಿಸಿದ 'ಆದಿಪರ್ವ'ಕ್ಕೆ ಸುಕ್ಥಂಕರ್ ಒಂದು ಮುನ್ನುಡಿ ಅಥವಾ ಉಪೋದ್ಘಾತವನ್ನು '**Prolegomena**' ಬರೆದಿದ್ದಾರೆ. ದೀರ್ಘವಾಗಿರುವ ಈ ಉಪೋದ್ಘಾತದಲ್ಲಿ, ಸುಕ್ಥಂಕರ್, ಆನಂದತೀರ್ಥರ ಉಲ್ಲೇಖವನ್ನು ಮಾಡುವುದೇ ಇಲ್ಲ. ಇದು ಆಶ್ಚರ್ಯ. ಏಕೆಂದರೆ, ಆರು ಶತಮಾನಕ್ಕೂ ಹಿಂದೆ, ಮಹಾಭಾರತದ ಶುದ್ಧ ಪಾಠದ ಅಗತ್ಯವನ್ನು ಮನಗಂಡು, ಮಹಾಭಾರತದಲ್ಲಿ ಪ್ರಕ್ಷೇಪಗಳೂ ಅಂದರೆ ಹೊಸತಾಗಿ ಸೇರಿಸುವಿಕೆಗಳೂ, ಮುಚ್ಚಿಹಾಕುವಿಕೆಗಳೂ ನಡೆದಿವೆ ಎಂದು ಸಾರಿ, ತಮ್ಮ ಗ್ರಹಿಕೆಯಂತೆ ಮಹಾಭಾರತದ ತಾತ್ಪರ್ಯ ನಿರ್ಣಯವನ್ನು ಜನರ ಮುಂದಿಟ್ಟವರು ಆನಂದತೀರ್ಥರು. ಇದೇ ದಾರಿಯ ಆಧುನಿಕ ಗ್ರಂಥದಲ್ಲಿ, ಆನಂದ ತೀರ್ಥರ ಗ್ರಂಥದ ಉಲ್ಲೇಖವಿರುವುದು ಉಚಿತವಾಗಿರುತ್ತಿತ್ತು ಆದರೆ ಅದಿಲ್ಲ!

ಸುಕ್ಥಂಕರ್ ಇನ್ನೊಂದು ಆಶ್ಚರ್ಯಕ್ಕೆ ಕಾರಣರಾದರು. ಮಹಾಭಾರತವನ್ನು ಕುರಿತು ತಾವು ಮಾಡಿದ ಭಾಷಣಗಳಲ್ಲಿ , ತಾವೇ ಪ್ರಕ್ಷೇಪಗಳೆಂದು ಕೈಬಿಟ್ಟ ಶ್ಲೋಕಗಳನ್ನು, ಸಾಲುಗಳನ್ನು ಉದ್ಧರಿಸಿದರು. ಉದ್ದೇಶ ಪೂರ್ವಕವಾಗಿ ಉದ್ಧರಿಸಿದರು. ಸುಕ್ಥಂಕರ್ ಭಾಷಣಗಳನ್ನು ಪುಸ್ತಕವಾಗಿ '**ON THE MEANING OF THE MAHABHARATHA**' ಎನ್ನುವ ಹೆಸರಿನಲ್ಲಿ ಪ್ರಕಟಿಸಿದ **ASIATIC SOCIETY OF BOMBAY**ಯ ಕಾರ್ಯದರ್ಶಿಯವರು ತಮ್ಮ ಟಿಪ್ಪಣಿಯಲ್ಲಿ ಹೀಗೆ ಹೇಳಿದರು. **A Scholar of Dr.Sukthankar's reminence who spent a lifetime in practising the Analytieal approach of the study of the mahabharata appears to end up with what is tantamount to its negation!**' ಅಂದರೆ ತಮ್ಮ ದಾರಿಯನ್ನು ತಾವೇ ವಿರೋಧಿಸಿದರು! ತಮ್ಮನ್ನೇ ತಾವು ನಿರಾಕರಿಸಿ ಕೊಂಡರು. ಮಹಾಭಾರತದಲ್ಲೇ, ಕೌರವ–ಪಾಂಡವ ಯುದ್ಧದಲ್ಲಿ ಪಾಂಡವರು ಗೆದ್ದ ಮೇಲೆ, ಚಕ್ರವರ್ತಿಯಾದ ಧರ್ಮರಾಜನು– ಇದು ಗೆಲವೋ–ಸೋಲೋ ಎಂದೇ ತಿಳಿಯುತ್ತಿಲ್ಲ ಎಂದು ಆಳವಾದ ಕಾಣ್ಕೆಯೊಂದರಿಂದ ಉದ್ಗರಿಸುತ್ತಾನೆ! ಮಹಾಭಾರತದ ಸಂಪಾದಕರಾದ ಸುಕ್ಥಂಕರ್‌ಗೂ ಇದೇ ಆಳವಾದ ಅವಸ್ಥೆ ಒದಗಿತೆ?

ತಮ್ಮ ಭಾಷಣದಲ್ಲಿ ಒಂದೆಡೆ ಸುಕ್ಥಂಕರ್ ಹೇಳಿದರು 'ಮಹಾ ಭಾರತದ ಅಂತರಾರ್ಥವೇನು? ಅದರ ಗಹನತೆಗೆ ಕಾರಣಗಳೇನು? ಗಹನವಾಗಿದ್ದೂ ಇಷ್ಟುಕಾಲ– ಇನ್ನಷ್ಟುಕಾಲ ಇದು ಸಾಗಿ ಬಂದಿರುವುದು ಹೇಗೆ? ಈ ಎಲ್ಲ ಪ್ರಶ್ನೆಗಳನ್ನು ಎದುರಿಸುವುದು ಎಂಥ ವಿದ್ವಾಂಸರಿಗೂ ಸರಳವಾದುದಲ್ಲ. ಆದರೆ ಈ ಬಗ್ಗೆ ಅದೊಂದು ಬಗೆಯ ಶ್ರದ್ಧೆಯಿಂದ ನಂಬಿಕೊಂಡು ಬಂದಿರತಕ್ಕ ಸರಳ ಮನಸ್ಸಿನ ಭಾರತೀಯರಿದ್ದಾರಲ್ಲ – **Unsophistieated Indians** ಅವರಿಗೆ ಮಹಾಭಾರತವನ್ನು ಅರಿಯುವಲ್ಲಿ ಈ ಕಷ್ಟಗಳಿಲ್ಲ. ಹೌದು, ಮಹಾಭಾರತವೊಂದು ದೈವಿಕವಾದಕೃತಿ. ದೊಡ್ಡವೀರರು ದೈವದತ್ತ ಶಕ್ತಿಗಳಿಂದ ಹೋರಾಡಿದ ವಿವರಗಳಿರುವ ಕೃತಿ, 'ಕೌರವರು ಕೇಡು ಮಾಡಿದರು– ಪಾಂಡವರಿಗೆ ಬೆಂಬಲವಾಗಿ ಸ್ವಯಂ ಅವತಾರ ಪುರುಷನಾದ ಕೃಷ್ಣನಿದ್ದ. ಪಾಂಡವರು ಕೊನೆಗೂ ಗೆದ್ದರು. ಮನುಷ್ಯರು–ದೇವತೆಗಳು ಬೆರೆಯುತ್ತಿದ್ದ ಕಾಲವದು. ಅದರಲ್ಲಿ ಸಂದೇಹಿಸಬೇಡಾದುದೇನಿಲ್ಲ. ಎಂದು ಜನ ಮಹಾಭಾರತವನ್ನು ನಂಬುತ್ತಾರೆ. ಈ ಜನ, ಮಹಾಭಾರತವನ್ನು ಸರಿಯಾಗಿಯೇ ತಿಳಿದಿದ್ದಾರೆ ಮತ್ತು ವಿದ್ವಾಂಸರ ತಿಳುವಳಿಕೆಗಿಂತಲೂ ಸಾಮಾನ್ಯ ಜನರ ಈ ನಂಬಿಕೆಯೇ ಮಹಾಭಾರತದ ಸರಿಯಾದ ಗ್ರಹಿಕೆಯಾಗಿದೆ'

ಕೊನೆಗೂ ಸುಕ್ಥಂಕರ್ ತಮ್ಮ **Sophistiation...** ಬಿಟ್ಟು ಕೊಟ್ಟರು. ವಿಶೇಷವನ್ನು ಬಿಟ್ಟುಕೊಟ್ಟು ಸಾಮಾನ್ಯತೆಯ ಮಹತ್ವವನ್ನು ತಿಳಿಸಿದರು. ಎಲ್ಲ ಕಲಿಯುವಿಕೆಯೂ ಏನೂ ಕಲಿಯದವರ ಮನದಾಳವನ್ನು ಮುಟ್ಟುವಲ್ಲಿ ಮಾತ್ರ ಸಾರ್ಥಕವಾಗುವುದೆ? ವಿದ್ವತ್ತು ನಿಜಕ್ಕೂ ಆಯಾಸವೆ? ತಾನು ತಿಳುವಳಿಕೆ ಎಂದು ತಿಳಿದಿರುವುದೇ ತಿಳುವಳಿಕೆಗೆ ಸಹಿಸಲಸಾಧ್ಯವಾದ ಒತ್ತಡವೆ? ತಾನು ತಿಳುವಳಿಕೆ ಎಂದು ಗೊತ್ತಿಲ್ಲದೆ ಇರುವ ತಿಳುವಳಿಕೆಯನ್ನೇ ನಾವು 'ನಂಬಿಕೆ' ಎನ್ನುವುದೆ? ಮಹಾಭಾರತದಂಥ ಗ್ರಂಥಗಳ ಅಧ್ಯಯನದಿಂದ ತಿಳಿದು ಬರುವ ಸತ್ಯ ಇದೇ ಏನು?

■ ತೋಷ

## ಮಾತೇ ಮುತ್ತು

★ ನನ್ನಲ್ಲಿ ಇರುವ ಅತ್ಯುತ್ತಮವಾದುದನ್ನು ಹೊರಗೆ ತೆಗೆಯುವವನೇ ನನ್ನ ಅತ್ಯುತ್ತಮ ಗೆಳೆಯ.

-ಹೆನ್ರಿ ಫೋರ್ಡ್

★ ನಿಮ್ಮ ಹೃದಯದಲ್ಲಿ ಮತ್ತು ಪ್ರತಿಯೊಬ್ಬ ಮನುಷ್ಯನಲ್ಲೂ ದೇವರು ನಿಮಗೆ ಕಾಣಸಲಿಲ್ಲ ಎಂದಾದರೆ ಅವನನ್ನು ಇನ್ನೆಲ್ಲಿ ಹುಡುಕಲು ಸಾಧ್ಯ?

-ಸ್ವಾಮಿ ವಿವೇಕಾನಂದ

★ ಸಂಶಯ ಪಡುವುದು ತಪ್ಪಲ್ಲ. ಆದರೆ ಜೀವನವಿಡೀ ಸಂಶಯಪಡುತ್ತಾ ಯಾವುದೇ ತೀರ್ಮಾನಕ್ಕೆ ಬರದಿರುವುದು ತಪ್ಪು.

-ಲು ಷುನ್

★ ಗೆಳೆತನ ಯಾವತ್ತಾದರೂ ಪ್ರೀತಿಯಾಗಿ ಬದಲಾಗಬಹುದು. ಆದರೆ ಪ್ರೀತಿ ಯಾವತ್ತೂ ಗೆಳೆತನವಾಗಿ ಬದಲಾಗದು.

-ಲಾರ್ಡ್ ಬೈರನ್

★ ನಿಮ್ಮ ಬರಿಗಾಲಿನ ಸ್ಪರ್ಶದಿಂದ ಭೂಮಿಗೆ ಖುಷಿಯಾಗುತ್ತದೆ; ಗಾಳಿ ನಿಮ್ಮ ಕೂದಲ ಜತೆ ಆಟವಾಡಲು ಬಯಸುತ್ತದೆ ಎನ್ನುವುದನ್ನು ಮರೆಯದಿರಿ.

-ಖಲೀಲ್ ಗಿಬ್ರಾನ್

★ ಹಣ ಹೋಗದೆಡೆಗೆಲ್ಲ ಗೆಳೆತನ ಮತ್ತು ಒಳ್ಳೆಯ ನಡವಳಿಕೆ ನಿಮ್ಮನ್ನು ಕೊಂಡೊಯ್ಯುತ್ತದೆ.

-ಮಾರ್ಗರೆಟ್ ವಾಕರ್